ಕಡಲೆಕಾಳು ಗಣಪತಿ ಬೇಕೇ ಅಥವಾ ಹಿಮಾಲಯದ ಪರ್ವತ ಬೇಕೇ?' ಎಂದು ಕೇಳುತ್ತಾರೆ ಈ ಕಲಾಬ್ರಹ್ಮ!

ಕಲಾಸಂತೆಗಳಿಗೆ ಹೋಗಿ ಪೇಂಟಿಂಗ್‌ಗಳನ್ನು ತಂದು ಗೋಡೆ ಅಲಂಕರಿಸುವುದು ಈಗ ಹಳೆಯ ವಿಧಾನ. ನಿಮಗೆ ಇಂತಹ ಕಲಾಕೃತಿ ಬೇಕೆಂದರೆ ವಾರೂಚ್ ಅವರಂತಹ ಕಲಾವಿದರ ತಂಡ ಗೋಡೆಯ ಮೇಲೆಯೇ ಅಂತಹ ಅಂದದ ಕಲಾಕೃತಿ ರಚಿಸಿ, ಅದಕ್ಕೊಂದು ಅಷ್ಟೇ ಮುದ್ದಾದ ಚೌಕಟ್ಟನ್ನೂ ನಿರ್ಮಿಸಿಬಿಡುತ್ತಾರೆ. ಪೇಂಟಿಂಗ್‌ನ ತಲೆ ಮೇಲೆ ಹೊಡೆಯುವಂತೆ ಈ ಕಲಾಕೃತಿ ಇರುತ್ತದೆ. ಅಂತಹ ರಚನೆಗಳಿಂದ ಇಡೀ ಮನೆಯೇ ಒಂದು ಕಲಾಕೃತಿ ರೂಪವನ್ನು ಪಡೆಯುತ್ತದೆ.



ಇಂಡೋನೇಷ್ಯಾ ಕಲಾವಿದರ ಕೈಚಳಕದಲ್ಲಿ ಗೋಡೆಗಳ ಮೇಲೆ ಉಬ್ಬು ಚಿತ್ರಗಳು, ಹೂದಾನಿಗಳು ಅರಳಿ ನಿಂತಿವೆ. ಗೋಡೆಗುಂಟ ಲಂಬ ಉದ್ಯಾನಗಳು ಬೆಳೆದಿವೆ. ಆ ಉದ್ಯಾನದ ಹೂವನ್ನು ಮುಟ್ಟಿ ನೋಡಿದರೆ ಮಾತ್ರ ಅದು ಕೃತಕ ಎಂಬುದು ಗೊತ್ತಾಗುತ್ತದೆ. ತಾರಸಿಯಿಂದ ಜೋತು ಬಿಟ್ಟಂತೆ ಸೀಲಿಂಗ್‌ಗೆ ಅಂಟಿಕೊಂಡ ಹೂಕುಂಡಗಳು ಚಿತ್ತಾಪಹಾರಿ ಆಗಿರುತ್ತವೆ. ಬಾಳೆಯ ಗಿಡಗಳು ಹಸಿರಾದ ಉದ್ದುದ್ದ ಎಲೆಗಳಿಂದ ಕಂಗೊಳಿಸುತ್ತವೆ. ವಾಷ್ ಬೇಸಿನ್‌ನಲ್ಲಿ ಕೈತೊಳೆದ ನೀರು ಪುಟ್ಟ ಜಲಪಾತದಂತೆ ಹರಿದು ಹೋಗುತ್ತದೆ. ಆದರೆ, ಎಲ್ಲಿಯೂ ಗಲೀಜು ಮಾಡದೆ ಹೊರಗಿನ ಉದ್ಯಾನಕ್ಕೆ ಹರಿದು ಹೋಗುತ್ತದೆ. ಗಿಡಮರಗಳು, ಹುಲ್ಲಿನ ಹಾಸು, ದುಂಬಿಗಳಿಂದ ಪಡಸಾಲೆ ಉದ್ಯಾನದಂತೆ ಗೋಚರಿಸುತ್ತದೆ. ಮನೆಯ ಮಂದಿ ಏನಾದರೂ ದೈವಭಕ್ತರಾಗಿದ್ದರೆ ತಿರುಪತಿ ತಿಮ್ಮಪ್ಪ, ತಿರುವನಂತಪುರದ ಪದ್ಮನಾಭ, ಮಥುರೆಯ ಕೃಷ್ಣ ಅವರ ಮನೆಗಳಲ್ಲಿ ಪವಡಿಸಲಿದ್ದಾರೆ.

ಮನೆಯಲ್ಲಿ ಕೂರುವವರಿಗೆ ಸೋಫಾ ಸೆಟ್ಟೇ ಏಕೆ ಬೇಕು ಎನ್ನುವವರಿಗೆ ಬಾಳೆದಿಂಡಿನ, ತೆಂಗಿನ ಮರದ, ಸೀಳಿದ ಬೊಂಬಿನ ಆಸನಗಳು ಸಿದ್ಧವಾಗಲಿವೆ. ಈ ಬಾಳೆದಿಂಡು, ತೆಂಗಿನ ಮರ, ಬಿದಿರನ್ನು ತರಲು ಎಲ್ಲಿಗೂ ಹೋಗಬೇಕಿಲ್ಲ. ಸ್ಟೀಲ್ ಸಿಮೆಂಟ್ ಇದ್ದರೆ ಸಾಕು, ಕಲಾವಿದರ ತಂಡ ಮನೆಯಲ್ಲೇ ಸೃಷ್ಟಿ ಮಾಡುತ್ತದೆ. ಗೋಡೆಯ ಮೇಲೊಂದು ಆಳೆತ್ತರದ ಕಿಟಕಿ ಚಿತ್ರ ತೆಗೆದು, ಅದಕ್ಕೆ ಹಾಕಿದ ಕರ್ಟನನ್ನು ಪಕ್ಕಕ್ಕೆ ಸರಿಸಲಾಗಿದೆ ಎಂಬಂತೆ ಭ್ರಮೆ ಮೂಡಿಸಿ, ಅದರಲ್ಲೊಂದು ಸೂರ್ಯಾಸ್ತದ ಸೊಬಗು ತೋರಿಸುವ ಕಲಾವಿದರ ಕೈಚಳಕ ಅನನ್ಯವಾದುದು. ಹಜಾರದಲ್ಲಿನ ಕೊಳದ ನೀರಿನ ಪ್ರತಿಬಿಂಬ ಸೀಲಿಂಗ್ ಮೇಲೆ ಕಾಣಿಸಿಕೊಳ್ಳುತ್ತದೆ.

ಮನೆಯಲ್ಲಿ ಅವತರಿಸುವ ಪ್ರತಿಕೃತಿಗಳು ಇಲ್ಲವೆ ಪೇಂಟಿಂಗ್‌ಗಳು ತಾತ್ಕಾಲಿಕವೇನಲ್ಲ. ಅವುಗಳು ಸಹ ಮನೆಯ ಇಮಾರತಿನಷ್ಟೇ ಶಾಶ್ವತವಾದುವು. ಪ್ರತಿವರ್ಷ ಪೇಂಟ್ ಮಾಡಿಸುವ ಜರೂರತ್ತು ಸಹ ಇಲ್ಲ. ಅಲ್ಲದೆ, ಅದರ ನಿರ್ವಹಣೆಗೆ ಸ್ಥಳೀಯ ಕಲಾವಿದರ ತಂಡವೂ ಇದೆ.

ಮಲೆನಾಡಿನ ತೀರ್ಥಹಳ್ಳಿಯ ಉಮರ್, ಕೆಲಕಾಲ ದುಬೈನಲ್ಲಿದ್ದರು. ಆಗ ಸ್ನೇಹಿತರ ಮನೆಗಳಿಗೆ ತೆರಳಿದಾಗ ಅವರ ಗಮನ ಸೆಳೆದಿದ್ದು ಇಂಡೋನೇಷ್ಯಾ ಕಲೆ. ಗಲ್ಫ್‌ನ ಆ ನಗರದ ಕಟ್ಟಡ ಉದ್ಯಮದಲ್ಲಿ ಕೆಲಸ ಮಾಡುತ್ತಿರುವವರಲ್ಲಿ ಕೇರಳದ ಕಾರ್ಮಿಕರು ಹೆಚ್ಚಿನ ಸಂಖ್ಯೆಯಲ್ಲಿ ಇದ್ದಾರೆ. 'ಈ ಕಲೆಯನ್ನು ಭಾರತಕ್ಕೂ ಏಕೆ ಒಯ್ಯಬಾರದು?' ಎಂಬ ಆಲೋಚನೆ ಉಮರ್ ಅವರಲ್ಲಿ ಮೊಳಕೆಯೊಡೆದಾಗ ಅಲ್ಲಿ ಕೆಲಸ ಮಾಡುತ್ತಿದ್ದ ಕಲಾವಿದರಾದ ವಾರೂಚ್ ನೆಗೊಸಿಕೊ ಅವರನ್ನು ಭಾರತಕ್ಕೆ ಕರೆತಂದರು. ಅವರೊಂದಿಗೆ ಕೇರಳದ ಕಲಾವಿದರೂ ಬಂದರು. ಒಂದೂವರೆ ವರ್ಷದಿಂದ ಈ ಕಲಾವಿದರಿಗೆ ಬೆಂಗಳೂರು, ಕೊಯಮತ್ತೂರು, ಚೆನ್ನೈಗಳಲ್ಲಿ ಬಿಡುವಿಲ್ಲದ ಕೆಲಸ. ಅವರ ಸೇವೆ ಅಪೇಕ್ಷಿಸಿ ಸರದಿಯಲ್ಲಿ ನಿಂತಿರುವ ಮನೆ ಮಾಲೀಕರ ಸಂಖ್ಯೆಯೂ ದೊಡ್ಡದಿದೆ.

ಉಮರ್ ಅವರಿಗೆ ಮಾತನಾಡಲೂ ಪುರುಸೊತ್ತಿಲ್ಲ. ರಮ್ಜಾನ್‌ನ ಈ ಅವಧಿಯಲ್ಲೂ ಸಹರಿಯಿಂದ ಇಫ್ತಾರ್‌ವರೆಗೆ ಅವರು ಪೂರ್ತಿ ಬ್ಯುಸಿ. ಮಧ್ಯದಲ್ಲಿ ಪ್ರಾರ್ಥನೆಗೆ ಮಾತ್ರ ಬಿಡುವು ಮಾಡಿಕೊಳ್ಳುವ ಅವರಿಗೆ ಹತ್ತಾರು ಮನೆಗಳ ಒಳಾಂಗಣ ವಿನ್ಯಾಸಕ್ಕೆ ಸಮಯವೇ ಸಾಲುತ್ತಿಲ್ಲ. ಒಂದು ಮನೆಯಿಂದ ಮತ್ತೊಂದಕ್ಕೆ ಅವರು ಎಡತಾಕುತ್ತಲೇ ಇದ್ದಾರೆ.

ಈ 'ಇಂದ್ರಪ್ರಸ್ಥ ಒಳಾಂಗಣ ವಿನ್ಯಾಸ'ಕ್ಕೆ ಎಷ್ಟು ಖರ್ಚು ಬರುತ್ತದೆ ಎಂದು ಪ್ರಶ್ನಿಸಿದರೆ ಉಮರ್ ನಕ್ಕು ಬಿಡುತ್ತಾರೆ. 'ನೀವು ಗಾಬರಿ ಬೀಳುವಷ್ಟು ದೊಡ್ಡ ಪ್ರಮಾಣದಲ್ಲಿ ಏನೂ ಇಲ್ಲ. ನೀವು ಬೇಡುವ ವಿನ್ಯಾಸಕ್ಕೆ ತಕ್ಕಂತೆ ಖರ್ಚು ಮಾಡಲು ಸಿದ್ಧರಿರಬೇಕು. 800 ಚದರ ಅಡಿ ಮನೆಯ ಒಳಾಂಗಣ ವಿನ್ಯಾಸಕ್ಕೆ ಕನಿಷ್ಠ ಎರಡು ಲಕ್ಷ ರೂಪಾಯಿ ಬೇಕು. ಗರಿಷ್ಠ ಇಷ್ಟೇ ಎಂದು ಹೇಳೋಕೆ ಆಗಲ್ಲ' ಎನ್ನುತ್ತಾರೆ ಅವರು.

'ನಿಮ್ಮ ಮನೆಗೆ ಖರ್ಚು ಮಾಡಿದ್ದು ಎಷ್ಟು' ಎಂದು ಕೇಳಿದರೆ, 'ಆ ಲೆಕ್ಕಾಚಾರ ಬೇಡ, ಈಗ ನಿಮ್ಮ ಮನೆಗೆ ಎಷ್ಟು ಮೊತ್ತದ ವಿನ್ಯಾಸ ಬೇಕು ಹೇಳಿ' ಎಂದು ಮರುಪ್ರಶ್ನೆ ಹಾಕುತ್ತಾರೆ. ತಮ್ಮ ಮನೆಯನ್ನೇ ಮಾಡೆಲ್ ಆಗಿ ಇಟ್ಟುಕೊಂಡು ಅವರು ತಮ್ಮ ಉದ್ಯಮವನ್ನು ಆರಂಭಿಸಿದ್ದಾರೆ. ತ್ರೀಡಿ ಚಿತ್ತಾರದ ಒಳಾಂಗಣ ವಿನ್ಯಾಸದ ನೇರ ಪ್ರಾತ್ಯಕ್ಷಿಕೆಯನ್ನು ಅವರ ಮನೆಯಲ್ಲಿ ನೋಡಿ ಮನಸೋಲದೇ ಇರಲು ಸಾಧ್ಯವೇ ಇಲ್ಲ.

ಆದರೆ ಒಂದು ವಿಷಯದಲ್ಲಿ ಉಮರ್ ಅವರದ್ದು ನೇರ ಮಾತು. 'ಇದ್ಯಾವುದೂ ನೈಸರ್ಗಿಕ ಅಲ್ಲ, ಕಲಾತ್ಮಕ ಮರುಸೃಷ್ಟಿ. ಕಲಾಪ್ರಿಯರಿಗೆ ಮನಸ್ಸು ಮುದಗೊಳಿಸುವಂತಹದ್ದು. ಹೌದು, ನಮ್ಮ ಮನೆಯಲ್ಲಿ ಹಣ್ಣುಗಳು, ಹೂವುಗಳು ಎಲ್ಲವೂ ಇವೆ. ಆದರೆ, ಅವುಗಳನ್ನು ತಿನ್ನೋಕೆ ಆಗಲ್ಲ. ಮರಗಳಿದ್ದರೂ ಗಾಳಿ ಬೀಸಲ್ಲ. ಹಕ್ಕಿಗಳು ಹಾಡು ಹೇಳುವುದಿಲ್ಲ. ನಿಸರ್ಗಕ್ಕೆ ಸವಾಲು ಎಸೆಯುವಂತಹ ಮರುಸೃಷ್ಟಿ ಇದು. ಕಾಂಕ್ರೀಟ್ ಕಾಡಿನಲ್ಲಿ ಮನೆ ಕಟ್ಟಿಕೊಂಡು ಪ್ರಾಕೃತಿಕ ಸನ್ನಿವೇಶ ಬಯಸುವ ಕಲಾಪ್ರಿಯರಿಗೆ ಈ ವ್ಯವಸ್ಥೆಯೇ ಹೊರತು, ನೈಜ ನಿಸರ್ಗ ಬಯಸುವವರಿಗೆ ಅಲ್ಲ' ಎನ್ನುತ್ತಾರೆ ಅವರು.

ಕೃತಕವಾದರೂ ಒಳಾಂಗಣ ವಿನ್ಯಾಸವನ್ನು ಶ್ರೀಮಂತಗೊಳಿಸುವ ಈ ಕಲಾಪ್ರಪಂಚ ಆಹ್ಲಾದಕರ ವಾತಾವರಣ ಉಂಟುಮಾಡುವುದು ಸುಳ್ಳಲ್ಲ.

**(ಬಿ.ಎಂ.ಉಮರ್ ಹಾಜಿ ಸಂಪರ್ಕ: 9845069599)**